वसुधैव कुटुम्बकम्
ONE EARTH • ONE FAMILY • ONE FUTURE

**ಉಪ ಕಾರ್ಮಿಕ ಆಯುಕ್ತರು**
**ಪ್ರಾದೇಶಿಕ-2, ಬೆಂಗಳೂರು**

**ಕರ್ನಾಟಕ ಸರ್ಕಾರ**
**ಕಾರ್ಮಿಕ ಇಲಾಖೆ**

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029
ಕಛೇರಿ: 080-29753087
ಇಮೇಲ್:dlc2bng@gmail.com

ಸಂಖ್ಯೆ: ಉಕಾಆಬೆಂ-2/ಸಿಎಸ್ಆರ್/2023-24 ದಿನಾಂಕ: 14/07/2023

## : ಸಭಾ ಆಹ್ವಾನ ಪತ್ರ :

ವಿಷಯ: ಕಾರ್ಪೋರೇಟ್ ಕಂಪನಿಗಳ CSR ನಿಧಿಯಿಂದ ವಿಶೇಷ ಚೇತನರಿಗೆ ತ್ರಿಚಕ್ರ ವಾಹನಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕಾರ್ಮಿಕ ಸಚಿವರ ಟಿಪ್ಪಣಿ ಸಂಖ್ಯೆ: ಕಾಸಕ/652/2023, ದಿನಾಂಕ: 07/07/2023

******

ಮಾನ್ಯರೇ,

ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ಕಾರ್ಮಿಕ ಸಚಿವರು ಉಲ್ಲೇಖಿತ ಟಿಪ್ಪಣಿಯಲ್ಲಿ ವಿಶೇಷ ಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಅವರುಗಳನ್ನು ಮಾನಸಿಕವಾಗಿ ಸದೃಢಗೊಳಿಸಿ ಸ್ವತಂತ್ರವಾಗಿ ಜೀವಿಸಲು ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನವನ್ನು ಒದಗಿಸುವ ಸಲುವಾಗಿ CSR ನಿಧಿಯನ್ನು ಪಾವತಿಸುವ ಕಾರ್ಖಾನೆ ಮತ್ತು ಕಾರ್ಪೋರೇಟ್ ಸೇರಿದಂತೆ ಇತರೆ ವಾಣಿಜ್ಯ ಸಂಸ್ಥೆಗಳ ಉದ್ಯೋಗದಾತರನ್ನು ಸಂಪರ್ಕಿಸಿ ಜಿಲ್ಲೆಗೆ ತಲಾ 5000 ದಂತೆ ಕಂಪನಿಗಳ ಪ್ರಾಯೋಜಕತ್ವದಲ್ಲಿ CSR ನಿಧಿಯಿಂದ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ಒದಗಿಸಲು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಆದ್ದರಿಂದ, ಮಾನ್ಯ ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು ಮತ್ತು ಮಾನ್ಯ ನಿರ್ದೇಶಕರು, ಕಾರ್ಖಾನೆಗಳು ಮತ್ತು ಬಾಯ್ಲರ್‌ಗಳ (ಸುರಕ್ಷತೆ) ಇಲಾಖೆ, ಬೆಂಗಳೂರು ಇವರ ಜಂಟಿ ಅಧ್ಯಕ್ಷತೆಯಲ್ಲಿ **ದಿನಾಂಕ: 19/07/2023ರಂದು ಬೆಳಿಗ್ಗೆ 11.00 ಗಂಟೆಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ಸರ್ಕಲ್ ಹತ್ತಿರ, ಬೆಂಗಳೂರು-560 029** ರ ಸಭಾ ಭವನದಲ್ಲಿ ಸಭೆಯನ್ನು ಆಯೋಜಿಸಲಾಗಿದ್ದು, ತಮ್ಮ ಕಂಪನಿಯ CSR ನಿಧಿಯಿಂದ ವಿಶೇಷ ಚೇತನರಿಗೆ ಅಂದಾಜು ಒದಗಿಸಬಹುದಾದ ತ್ರಿಚಕ್ರ ವಾಹನಗಳ ಸಂಖ್ಯೆಯ ಮಾಹಿತಿಯೊಂದಿಗೆ ಹಾಜರಾಗಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

H L 14/7/23

(ಹೆಚ್.ಎಲ್. ಗುರುಪ್ರಸಾದ್)
ಉಪ ಕಾರ್ಮಿಕ ಆಯುಕ್ತರು,
ಪ್ರಾದೇಶಿಕ-2, ಬೆಂಗಳೂರು

ಇವರಿಗೆ,